# ವಚನ ಪರಂಪರೆ ಮತ್ತು ಆಧುನಿಕ ವಚನ ಸಾಹಿತ್ಯ ಬೆಸೆಯುವ ಮಹಾನುಭಾವಿಗಳ ಅಮೃತ ವಾಣಿಗಳು

**ಡಾ. ಹೆಚ್. ಎಸ್. ಪ್ರೇಮಲತ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,**

**ಚಾಮರಾಜನಗರ**

ಜೀವನ ಸಿದ್ಧಾಂತವನ್ನು ಪ್ರತಿಪಾದಿಸುವ ವಚನ ಸಾಹಿತ್ಯ ಲೌಕಿಕ ಮತ್ತು ಪಾರಮಾರ್ಥಿಕಗಳನ್ನು ಬೆಸೆಯುವಮಹಾನುಭಾವಿಗಳ ಅಮೃತ ವಾಣಿಗಳಾಗಿವೆ. ಈ ಬಗೆಯ ಸಾಹಿತ್ಯ ಪ್ರಕಾರವು ಹನ್ನೆರಡನೆಯ ಶತಮಾನದಲ್ಲಿ ವಿಶೇಷ ಪಭಾವವನ್ನು ಬೀರಿ ಸುವರ್ಣ ಯುಗವನ್ನು ನಿರ್ಮಿಸಿತು. ಸ್ವಾನುಭವವೇ ವಚನಗಳ ಅಂತರಂಗವಾಗಿದ್ದು ಅದು ಲೌಕಿಕ ಮತ್ತು ಅಲೌಕಿಕಗಳನ್ನು ಒಂದು ಗೂಡಿಸುವ ಸೋಪಾನ ವಾಗಿದೆ. ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಕಕ್ರಾಂತಿಗೆಕಾರಣವಾದ ವಚನಗಳಿಗೆ ಜಾತಿ, ಜನಾಂಗದ ಕಟ್ಟು ನಿಟ್ಟಿಲ್ಲ. ಸುಮಾರು ೮೦೦ ವರ್ಷಗಳಿಗೂ ಹೆಚ್ಚು ಇತಿಹಾಸವನ್ನು ಹೊಂದಿರುವ ವಚನ ಸಾಹಿತ್ಯ ತನ್ನ ಗಟ್ಟಿತನದಿಂದ ಇಂದಿಗೂ ಸಜೀವ ಸಾಹಿತ್ಯವೆನಿಸಿದೆ. ಕನ್ನಡ ಸಾಹಿತ್ಯಕ್ಕೆ ವಿಶ್ವ ಸಾಹಿತ್ಯದಘನತೆ ಗೌರವಗಳನ್ನು ತಂದುಕೊಟ್ಟಕೀರ್ತಿ ವಚನ ಸಾಹಿತ್ಯಕ್ಕೆ ಸಲ್ಲುತ್ತದೆ. "ಈ ವಚನಗಳು ಅಂಕಿತವನ್ನೊಳಗೊಂಡ ಶರಣರ ಉತ್ಕಟ ಅನುಭಾವ ಗೀತಗಳು. ಅವು ಭಾವಗೀತೆಯ ಭಾವ ತೀವ್ರತೆಯನ್ನೂ, ವಸ್ತುವಿನ ಏಕಮುಖತೆಯನ್ನೂ, ವ್ಯಕ್ತಿನಿಷ್ಠೆಯ ಹೆಚ್ಚಳವನ್ನೂ ನಿಚ್ಚಳವಾಗಿ ಒಳಗೊಂಡಿವೆ.". ಅವುಗಳಲ್ಲಿ ಕಾವ್ಯಧರ್ಮ ಮತ್ತು ಮಾನವಧರ್ಮಗಳ ತಿರುಳು ಸಮರಸಗೊಂಡು ಸುಂದರವಾದ ಭಾವಾಭಿವ್ಯಕ್ತಿಯನ್ನು ಪಡೆದಿವೆ. ದೇಶ ಭಾಷೆಯ ಪರಿಮಿತ ಮೇರೆಯಿಲ್ಲ. ಕಾಲದ ಪರಿದಿಗೂ ಅವು ಒಳಪಡುವುದಿಲ್ಲ. ಮಾನಸ್ಸಿನ ಸಂಕುಚಿತ ಭಾವನೆಗಳನ್ನು ತೊಲಗಿಸಿ, ಭಕ್ತಿ, ಸತ್ಯ, ನಿಷ್ಠೆ, ಸಮತೆ ಸ್ಥೈರಣೆ ಮೊದಲಾದ ಉದಾತ್ತ ಭಾವನೆಗಳನ್ನು ಉದ್ದೀಪನಗೊಳಿಸುವ ವಚನಗಳು ಸತ್ಯಸೌಂದರ್ಯದ ಸಾಕ್ಷಾತ್ಕಾರವನ್ನು ಮೂಡಿಸುತ್ತವೆ. ಇಂತಹ ಮಹತ್ಕಾರ್ಯವನ್ನು ಸಾಧಿಸಿದ ವಚನ ಸಂಪ್ರದಾಯ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಯಾಗಿದೆ. ವಚನ ಸಾಹಿತ್ಯ ಪರಂಪರೆ ದಾಸಿಮಯ್ಯ ಯುಗ ವಚನ ಸೃಷ್ಟಿ ಸುಮಾರು ಹನ್ನೊಂದನೆಯ ಶತಮಾನದಲ್ಲಿ ದಾಸಿಮಯ್ಯನಿಂದ ಆರಂಭಗೊಂಡು ಬಸವಾದಿಮಹಾನುಭಾವಿಗಳ ಕಾಲಕ್ಕೆ ಮಹೋನ್ನತಿಯನ್ನು ಪಡೆದುಒಂದು ಸಜೀವ ಸತ್ಪರಂಪರೆಯಾಗಿ ಇಂದಿಗೂ ಮುಂದುವರೆದಿದೆ. ಹನ್ನೆರಡನೆಯ ಶತಮಾನದಬಸ ವಾದಿ ಶರಣರವಚನ ರಚನೆಗೆಅವರಿಗಿಂತಲೂ ಪೂರ್ವದಲ್ಲಿದ್ದ ಅನೇಕ ಶರಣರ ವಚನಗಳೇ ಅಡಿಪಾಯ. ಆದ್ಯರ ಬಹುಪಾಲು ವಚನಗಳು ಲಭ್ಯವಾಗಿಲ್ಲ. "ಪ್ರಥಮ ವಚನಕಾರನೆಂದು ಬಹುತೇಕ ವಿದ್ವಾಂಸರಿಂದಅಂಗೀಕರಿಸಲ್ಪಟ್ಟಿರುವಜೇಡರ ದಾಸಿಮಯ್ಯನಲ್ಲಿ 'ವಚನ' ಎಂಬ ಪದವೇ ದೊರೆಯುವುದಿಲ್ಲ. ಆತ ವಚನಗಳನ್ನು ಕುರಿತು ಹೇಳುವಾಗ 'ಮೃಡಭಕ್ತರ ನುಡಿಗಡಣ', 'ಶರಣರ ಸೂಳ್ನುಡಿ' ಎಂದೇ ಹೇಳುತ್ತಾನೆ" ಭಕ್ತಿ ಪ್ರಧಾನವಾದಆತ್ಮ ಸ್ತುತಿಯನ್ನು ಅಭಿವ್ಯಕ್ತಿಸುವಅಧ್ಯಾತ್ಮಿಕ ಗದ್ಯಗೀತೆಗಳಂತಿರುವ ವಚನಗಳನ್ನು ಸೂಳ್ನುಡಿಗಳೆಂದು ಕರೆಯುತ್ತಿದ್ದರು ಎಂಬುದು ದಾಸಿಮಯ್ಯನ ವಚನದಿಂದ ತಿಳಿದುಬರುತ್ತದೆ.

ಕರಿಯನಿತ್ತೆಡೆ ಒಲ್ಲೆ ಸಿರಿಯನಿತ್ತೆಡೆ ಒಲ್ಲೆ ಹಿರಿದಪ್ಪರಾಜ್ಯವನಿತ್ತೆಡೆಒಲ್ಲೆ ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆಕಾಣಾರಾಮನಾಥ. ದಾಸಿಮಯ್ಯನ ಈ ವಚನ ಮೇಲಿನ ವಿಚಾರಕ್ಕೆ ಸಾಕ್ಷಿಯಾಗಿದೆ. ಸೂಳ್ನುಡಿ ಎಂದರೆ ತಿರುಳುಳ್ಳ ಮಾತು. ಸತ್ಯ, ಧರ್ಮ, ನ್ಯಾಯನೀತಿಯ ಧ್ಯೇಯ ವಾಕ್ಯ, ಸರದಿ ಮಾತು ಮುಂತಾದ ಅರ್ಥಗಳಿವೆ. ಜೀವಾನುಭವದ ಸಾರವನ್ನು ಸೂರೆಗೊಂಡುತತ್ವ ಸ್ವರೂಪವನ್ನು ಪಡೆದು ಆನದಮಯವಾಗಿ ಹೊರಹೊಮ್ಮಿದ ಶರಣರ ಶಬ್ಧ ಸಮೂಹವೇ ಸೂಳ್ನುಡಿ ಎನ್ನುವ ಅಭಿಪ್ರಾಯ ದಾಸಿಮಯ್ಯನ ವಚನದಲ್ಲಿ ಧ್ವನಿತವಾಗುತ್ತದೆ. ಮುಂದೆ ವಚನ ಎನ್ನುವ ಶಬ್ಧ ಅಲ್ಲಮಪ್ರಭು, ಬಸವಣ್ಣ, ಚನ್ನಬಸವಣ್ಣ, ಸಿದ್ದರಾಮ ಮೊದಲಾದವರಲ್ಲಿ ವಿಶೇಷ ಅರ್ಥದಲ್ಲಿ ಬಳಕೆಯಾಗಿದೆ. ಬಸವಾದಿ ಶರಣರ ಯುಗ "ತಮಿಳು ಶಿವಭಕ್ತರ ಉತ್ಕಟ ಭಕ್ತಿಯ ಮೂಲ ಸೆಲೆಯ ಜಲವನ್ನು ಹೀರಿಕನ್ನಡ ನಾಡಿನ ಶರಣರಸೂಳ್ನುಡಿಗಳು ಅಂಕುರಿಸಿದವು. ಆದ್ಯರ ಈ ಸೂಳ್ನುಡಿಗಳೇ ವಚನಗಳಿಗೆ ಆದಿ. ಅವುಗಳ ಪ್ರಭಾವದಿಂದ ಪ್ರೇರಿತರಾದ ಬಸವಾದಿ ಅನೇಕ

ಶರಣರು ವಚನ ಸಾಹಿತ್ಯದ ಬೆಳೆಯನ್ನು ಹುಲುಸಾಗಿ ಬೆಳೆದರು." ವಚನಕಾರರು ಸಾಹಿತ್ಯ ಸೃಷ್ಟಿಗೆಂದೇ ವಚನಗಳನ್ನು ಬರೆದವರಲ್ಲವಾದರೂ ಬದುಕನ್ನು ಹಾಗೂ ಬದುಕಿನ ಮೌಲ್ಯಗಳನ್ನು ಹುಡುಕಿಕಟ್ಟುವ ಪ್ರಯತ್ನವಾಗಿ ವಚನಗಳನ್ನು ರಚಿಸಿದರು. ಅವರ ಸಾಹಿತ್ಯ ಸಂಸ್ಕಾರ, ಪ್ರತಿಭೆ ಹಾಗೂ ವ್ಯುತ್ಪತ್ತಿಗಳ ಕಾರಣವಾಗಿ ವಚನಗಳು ಸಾಹಿತ್ಯ ಸಮೃದ್ಧಿಯ ಗುಣಗಳನ್ನು ಪಡೆದವು. ಮೌಲ್ಯಗಳನ್ನು ಹುಡುಕಲು ಹೊರಟ ವಚನಕಾರರಿಗೆತಮ್ಮಕಾಲದಲ್ಲಿದ್ದ ಮೂಢನಂಬಿಕೆಗಳ ಟೊಳ್ಳುತನದ ಅರಿವಿತ್ತು. ಮಾನವ ಸ್ವಭಾವದ ಸಂಕೀರ್ಣತೆ ಮನವರಿಕೆಯಾಗಿತ್ತು. ಮಾರ್ಗ ಸಾಹಿತ್ಯದ ಬಿಗಿಯಾದ ಧೋರಣೆ ಮತ್ತು ಶೈಲಿ ಪರ್ಯಾಯ ಚಿಂತನೆ ಮತ್ತು ರಚನೆಗೆದಾರಿ ಮಾಡಿಕೊಟ್ಟಿತು. ಭಾರತೀಯ ಸಾಮಾಜಿಕವ್ಯವಸ್ಥೆಯಲ್ಲಿ ಅತ್ಯಂತ ಆಳವಾಗಿ ಬೇರೂರಿದ್ದಜಾತಿ ಪದ್ಧತಿಯನ್ನು ಧಿಕ್ಕರಿಸಿ, ಜಾತ್ಯಾತೀತವೆನ್ನಬಹುದಾದ ಸಮಾಜವನ್ನುಕಟ್ಟಲು ಹಲವರು ಹಂಬಲಿಸಿ, ರೂಢ ಮೂಲ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಆ ಕಾಲದಲ್ಲಿ ಸಿಡಿದೆದ್ದರು. ಧರ್ಮಗಳಿಗೆ ಅಂಟಿದಡಾಂಬಿಕತೆಯ ಹಿಂಸಾಚಾರದ ಅಂಶಗಳನ್ನು ಪ್ರತಿಭಟಿಸಿ, ವಾಮಾಚಾರಗಳಂತಹ ಅಸಹ್ಯ ಪದ್ಧತಿಗಳಿಂದ ಜಿಗುಪ್ಸೆಉಂಟು ಮಾಡುತ್ತಿದ್ದ ವಾತಾವರಣವನ್ನು ಅವುಗಳಿಂದ ಮುಕ್ತಗೊಳಿಸಲು ಪ್ರಯತ್ನಿಸಿದ ’ರು. ಶುದ್ಧ ಸಾತ್ವಿಕವೂ, ಕೇವಲ ಭಕ್ತಿಗೆ ಪ್ರಾಮುಖ್ಯವಿರುವಂತಹದೂ, ಐಹಿಕ ಭೋಗಗಳನ್ನನುಭವಿಸಿಯೂ ಸದ್ಗತಿಪಡೆಯಬಹುದೆಂದು ಬೋಧಿಸುವಧರ್ಮವೊಂದನ್ನು ಊರ್ಜಿತಗೊಳಿಸಲು ಪ್ರಯತ್ನಪಟ್ಟು ಸಫಲರಾದ ಕಾಲವಿದು. ಆದ್ಯರ ಸೂಳ್ನುಡಿಯಪ್ರಯೋಗದಿಂದ ಪ್ರಾರಂಭವಾದ ‘ವಚನ’ ರಚನ ’ ಬಸವಾದಿ ಶರಣರ ಕಾಲದಲ್ಲಿ ವಚನ ಸಾಹಿತ್ಯ ಪರಂಪರೆಯಾಗಿ ಪ್ರಖ್ಯಾತಿ ಪಡೆಯಿತು. ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನೊಳಗೆ ಅಲ್ಲಮ ಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚನ್ನ ಬಸವಣ್ಣ, ಸಿದ್ಧರಾಮ, ಅಂಬಿಗರ ಚೌಡಯ್ಯ ಮೊದಲಾದ ಶರಣರ ವಚನ ರಚನೆ ವಿಪುಲವೂ, ಸತ್ವಯುತವೂ ಆಗಿ ಅಂದಿನ ಜನಾಂಗದಮೇಲೆ ಮುದ್ರೆಯನ್ನೊತ್ತಿ ಜನ ಜಾಗೃತಿಯನ್ನುಂಟು ಮಾಡಿತು. ಹೊಸ–ಹೊಸ ಆಚಾರ–ವಿಚಾರಗಳುತಲೆಎತ್ತಿದವು. ಜನರಲ್ಲಿ ನೂತನಚೇತನ ಸಂಚಾರವಾದಂತಾಯಿತು. ಸಮೃದ್ಧವಾಗಿ ವಚನ ಸಾಹಿತ್ಯರಚನೆಯಾಯಿತು. ಕಲ್ಯಾಣದಲ್ಲಿ ಶಿವಶರಣರ ಸಾಮಾಜಿಕ ಚಳುವಳಿ ತೀವ್ರ ಸ್ವರೂಪವನ್ನು ಪಡೆಯುತಿದ್ದ ಆ ಸಂದರ್ಭದಲ್ಲಿಯೇ ಸಂಭವಿಸಿದ ರಾಜಕೀಯ ಕ್ರಾಂತಿಯ ಫಲವಾಗಿ ವಚನಕಾರರ ಆಶಯ ಮತ್ತು ಸಾಮಾಜಿಕ ಚಳುವಳಿಗೆ ಮುಂದೆ ಸ್ವಲ್ಪ ಮಟ್ಟಿನ ಹಿನ್ನಡೆಯಾಯಿತು. ತೋಂಟದ ಸಿದ್ಧಲಿಂಗೇಶ್ವರರ ಯುಗ ಹನ್ನೆರಡನೆಯ ಶತಮಾನದ’ ನಂತರ ಕೆಲಕಾಲ ಗುಪ್ತಗಾಮಿನಿಯಾದ ಈ ವಚನ ವಾಹಿನಿ ಹದಿನಾರನೆಯ ಶತಮಾನದಲ್ಲಿತೋಂಟದ ಸಿದ್ದಲಿಂಗೇಶ್ವರರಿಂದಾಗಿ ಪುನರುಜ್ಜೀವನ ಪಡೆಯಿತು. ಹದಿನೈದನೆಯ ಶತಮಾನದಉತ್ತರ ಭಾಗದಲ್ಲಿ ತಮ್ಮ ಶಿಷ್ಯರೊಂದಿಗೆ ಕನ್ನಡ ನಾಡಿನಲ್ಲಿ ವ್ಯಾಪಕವಾಗಿ ಶರಣಧರ್ಮ ಪ್ರಚಾರ ಕಾರ್ಯವನ್ನು ಕೈಗೊಂಡತೋಂಟದ ಸಿದ್ದಲಿಂಗೇಶ್ವರ ಶಿವಯೋಗಿಗಳು ವಚನ ರಚನೆಗೂ ಚಾಲನೆ ನೀಡಿದರು. ‘ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭು’ ಎಂಬ ಅಂಕಿತದಲ್ಲಿ ಏಳುನೂರ ಒಂದು ವಚನಗಳುಳ್ಳ ‘ಷಟ್‌ಸ್ಥಲ ಜ್ಞಾನಾಸಾರಾಮೃತ’ ಕೃತಿಯನ್ನು ರಚಿಸಿರುತ್ತಾರೆ. ಆ ಮೂಲಕ ವಚನ ಸಾಹಿತ್ಯ ಪರಂಪರೆ ಮುಂದುವರಿಯಲು ಮಾರ್ಗವನ್ನು ಕಲ್ಪಿಸಿಕೊಟ್ಟಿರುತ್ತಾರೆ. ಅವರ ಶಿಷ್ಯರಲ್ಲಿ ಅನೇಕರು ವಚನ ರಚಿಸಿದಂತೆ ತಿಳಿದುಬರುತ್ತದೆ. ಆ ಕಾಲ ಘಟ್ಟದಲ್ಲಿಕನ್ನಡ ನಾಡಿನಲ್ಲಿ ನಡೆದ ಆಗು–ಹೋಗುಗಳು ಎಲ್ಲರೀತಿಯಿಂದಲೂ ವಿಶಿಷ್ಟವಾದವು. ಕನ್ನಡ ಭಾಷೆಯು ನಡುಗನ್ನಡವೆಂಬ ಸ್ಪಷ್ಟ ಅವಸ್ಥಾಂತರವನ್ನು ಪಡೆದ ಕಾಲವದು. ಕನ್ನಡ ಸಾಹಿತ್ಯದದೃಷ್ಟಿಯಿಂದಲೂಅದು ಪ್ರಮುಖಘಟ್ಟ. ಚಂಪೂ ಕೃತಿ ಸಂಪ್ರದಾಯ ಇಳಿಮುಖವಾಗಿ, ಸಂಸ್ಕೃತ ಭೂಯಿಷ್ಟವಾದ ’ ಸಾಹಿತ್ಯವು ಕಡಿಮೆಯಾದ ಕಾಲವಿದು. ಅದುವರೆಗೂಕನ್ನಡ ಭಾಷೆಯ ಮೇಲೆ, ಸಾಹಿತ್ಯ ಸ್ವರೂಪದ ಮೇಲೆ, ವಸ್ತು ಛಂದಸುಗಳ ಮೇಲೆ ಸಂಸ್ಕೃತದ ಪ್ರಭಾವ ಬಹು ಹೆಚ್ಚಾಗಿದ್ದಿತು, ಆದರೆ ವಚನಗಳ ರಚನೆಯಿಂದಇದು ಬಹುಪಾಲು ಹೊಸದೆನ್ನುವಂತಹಘಟ್ಟವೊಂದನ್ನು ಮುಟ್ಟಿತು. ಅಂದಿನಿಂದಕನ್ನಡ ಕೃತಿಗಳಲ್ಲಿ ಸ್ವಂತಿಕೆಕಾಣಿಸಿಕೊಂಡಿತು. ಹದಿನೇಳನೆಯ ಶತಮಾನದಲ್ಲಿ ಬದುಕಿದ್ದ ಜೇವರಗಿಯ ಷಣ್ಮುಖ ಶಿವಯೋಗಿಗಳು ಶ್ರೇಷ್ಠ ವಚನಕಾರರು.ಇವರು ‘ಅಖಂಡೇಶ್ವರ’ ಅಂಕಿತದಲ್ಲಿ ಸು ೭೦೦ ವಚನಗಳನ್ನು ರಚಿಸಿರುವರೆಂದು ತಿಳಿದುಬರುತ್ತದೆ. ಕನ್ನಡ ಪ್ರಾಚೀನ ವಚನ ಸಾಹಿತ್ಯ ಪ್ರಕಾರ ಶರಣರಧರ್ಮತತ್ವ, ನೀತಿ, ಅನುಭಾವ, ಸಮಾಜ ಸುಧಾರಣೆ ಮೊದಲಾದ ಉದ್ದೇಶಗಳಿಗೆ ಮೀಸಲಾಗಿತ್ತು. ಮುಂದುವರಿದ ಭಾಗವಾಗಿ ಶ್ರೀ ಜಚನಿ, ಶ್ರೀ ಮೂಜಗಂ, ಶ್ರೀ ಶಿವಕುಮಾರಸ್ವಾಮಿ, ಮಾತೆ ಮಹಾದೇವಿ ಮೊದಲಾದವರ ರಚನೆಗಳು ತತ್ವಧರ್ಮದಂತಹ ವಿಷಯಗಳಅಭಿವ್ಯಕ್ತಿಗೆ ಸಮರ್ಥವಾಹಕಗಳಾದಂತೆಯೇ ಉತ್ತಮ ಸಾಹಿತ್ಯ ವಾಹಕಗಳೂ ಆಗಿವೆ. ಆಧುನಿಕ ಯುಗ ಆಧುನಿಕ ಯುಗದಲ್ಲಿ ಪ್ರಾಚೀನ ವಚನಗಳ ವ್ಯವಸ್ಥಿತ ಸಂಗ್ರಹ, ಸಂಪಾದನೆ, ವಿಮರ್ಶೆ, ವಿಶ್ಲೇಷಣೆ, ವ್ಯಾಖ್ಯಾನ ವ್ಯಾಪಕವಾಗಿ ನಡೆದಿದೆ. ಈ ದಿಸೆಯಲ್ಲಿ ಅನೇಕ ವಿದ್ವಾಂಸರು, ವಿಶ್ವ ವಿದ್ಯಾನಿಲಯಗಳು, ಮಠಗಳು, ಸಂಘ–ಸಂಸ್ಥೆಗಳು ಮಹತ್ವದ ಕಾರ್ಯನಿರ್ವಹಿಸುತ್ತಿವೆ. ಜೊತೆಗೆ

ವಚನ ಸಾಹಿತ್ಯ ಸೃಷ್ಟಿ ಗಮನಾರ್ಹವಾಗಿ ಸಾಗಿದೆ. ಆಧುನಿಕ ವಚನಕಾರರ ವಚನಗಳು ಸಮಕಾಲೀನ ಸಂಗತಿಗಳ ಮೇಲೆ ಬೆಳಕು ಚೆಲ್ಲಿ ಓದುಗರನ್ನು ಚಿಂತನೆಗೆ ತೊಡಗಿಸಲು ಸಹಾಯಕವಾಗಿವೆ. ವೈಚಾರಿಕತೆಯೊಂದಿಗೆ ಮಾನವೀಯತೆಯನ್ನು ಬಿಂಬಿಸುವುದು ಈ ವಚನಗಳ ವೈಶಿಷ್ಟ್ಯವಾಗಿದೆ. ಪ್ರಾಚೀನ ವಚನಕಾರರು ತಾವು ಕಾವ್ಯರಚನೆ ಮಾಡುತ್ತಿದ್ದೇವೆಂದು ಪ್ರಜ್ಞಾಪೂರ್ವಕವಾಗಿ ವಚನಗಳನ್ನು ರಚಿಸಲಿಲ್ಲ. ಅವರ ಮುಖ್ಯಗಮನವಿದ್ದುದು ತಾವು ಕಂಡ, ಅನುಭವಿಸಿದ, ಆಲೋಚಿಸಿದ ವಿಷಯಗಳನ್ನು ಇತರರಿಗೆ ತಿಳಿಸುವ ಜರೂರಿನ ಬಗ್ಗೆ. ಆದರೆ ಆಧುನಿಕ ವಚನಕಾರರಿಗೆ ವಚನಗಳು ಸಾಹಿತ್ಯದಒಂದು ಪ್ರಕಾರವಾಗಿದ್ದು, ಪ್ರಜ್ಞಾ ಪೂರ್ವಕವಾಗಿಯೇ ವಚನ ರಚನೆಗೆ ಕೈ ಹಾಕಿರುವದನ್ನು ಕಾಣಬಹುದು. ಸಮಾಜ ಜೀವಿಯಾದ ಕವಿ ಸಮಾಜದಲ್ಲಿ ನಡೆಯುವ ಪ್ರತಿಯೊಂದು ಸಂಗತಿಗೂ ಪ್ರತಿಕ್ರಿಯಿಸಿದ ರೀತಿಯೇ ವಚನಗಳಾಗಿವೆ. ಆಧುನಿಕ ಯುಗದಲ್ಲಿ ವಚನ ಸಾಹಿತ್ಯದ ವಿಶಾಲ ವ್ಯಾಪ್ತಿಯನ್ನು ಹರ್ಡೇಕರಮಂಜಪ್ಪ, ಎಸ್.ವಿರಂಗಣ್ಣ, ಡಿ.ವಿ. ಗುಂಡಪ್ಪ, ಎಸ್.ವಿ. ಪರಮೇಶ್ವರ ಭಟ್ಟ, ಮಹದೇವ ಬಣಕಾರ, ಸಿದ್ಧಯ್ಯ ಪುರಾಣಿಕ, ಸಿ.ಪಿ.ಕೆ, ಸಂಗಮೇಶ ಹಂಡಿಗಿ, ಚಂದ್ರಯ್ಯನಾಯ್ಡು ಮೊದಲಾದವರ ರಚನೆಗಳಲ್ಲಿ ಕಾಣಬಹುದು. ಇವರುತಮ್ಮ ಬದುಕಿನ ವೈವಿಧ್ಯಮಯ ಅನುಭವಗಳಿಗೆ ಅಭಿವ್ಯಕ್ತಿಯನ್ನು ಒದಗಿಸಲುವಚನ ಮಾಧ್ಯಮದ ಪ್ರಯೋಗವನ್ನು ನಡೆಸಿದರೆಂದು ತೋರುತ್ತದೆ. ಇವರ ವಚನಗಳು ಅಂಕಿತ ಮತ್ತು ವಚನ ಲಕ್ಷಣವನ್ನು ಹೊಂದಿದರೂ ಅವುಗಳ ಅಂತರಂಗಅನುಭಾವಕ್ಕೆ ಮಾತ್ರ ಸೀಮಿತವಾಗಿಲ್ಲ. ಅವುಗಳಲ್ಲಿ ಜೀವನದ ಬಹುಮುಖ ಅನುಭವಗಳನ್ನು ಅಭಿವ್ಯಕ್ತಗೊಳಿಸುವ ಹೊಸತನವಿದೆ. ಸಮಕಾಲೀನ ಸಾಮಾಜಿಕಪ್ರಜ್ಞೆಯಿದೆ. ಸಮಾಜಸುಧಾರಕ, ರಾಷ್ಟ್ರೀಯವಾದಿ ಹರ್ಡೇಕರ ಮಂಜಪ್ಪ ಎಸ್. ವಿ. ರಂಗಣ್ಣನವರ ಸಮಕಾಲೀನರಾಗಿದ್ದವರು. 'ಜನಸೇವಕನ ವಚನಗಳು' ಶೀರ್ಷಿಕೆಯಡಿಯಲ್ಲಿ ಹರ್ಡೇಕರ ಮಂಜಪ್ಪನವರ ವಚನಗಳು ಪ್ರಕಟವಾಗಿವೆ. ಅಲ್ಲಮ ಪ್ರಭುವಿನ ಜೀವನ ಸಾಧನ'ಯಿಂದ ಪ್ರಭಾವಿತರಾಗಿರುವ ಮಂಜಪ್ಪನವರು 'ಪ್ರಭುದೇವ' ಅಂಕಿತವಿರಿಸಿಕೊಂಡಂತಿದೆ. ಜನಸೇವೆಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿರಿಸಿದ ತಮ್ಮನ್ನು 'ಜನಸೇವಕ' ಎಂದು ಕರೆದುಕೊಂಡಿದ್ದಾರೆ. ಅವರ ವಚನದ ಮಾದರಿಯೊಂದು ಹೀಗಿದೆ. ಜನಹಿತಕ್ಕೆಧನ ವಂಚಿಸಿದೊಡೆ ಅದು ತನಗೆ ದರಿದ್ರವಯ್ಯ । ಪರಸೇವೆಗೆ ಧನ ಸೂರೆಮಾಡಿದೊಡೆ ಅದು ತನಗೆ ಸಿರಿವಂತಿಕೆಯಯ್ಯ । ಗೋವು ಕ್ಷೀರವಿತ್ತಾಗಲೇ ಪೂಜೆಗೊಂಬುದು ನೋಡಾ । ಇದು ಕಾರಣ ಪ್ರಭುದೇವಜನ ಸೇವಕರಿಗೆ ಧನವಿಲ್ಲದ ದಾನಿಯಾಗಿರಿಸಯ್ಯ.॥ ಸಮಾಜ ಸೇವೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡ ಶರಣಜೀವಿ ಮಂಜಪ್ಪನವರು ತ್ಯಾಗದಿಂದ ಕೂಡಿದ ಸೇವಾ ಜೀವನದ ಮಹತ್ವವನಿಲ್ಲಿ ವ್ಯಕ್ತಪಡಿಸಿದ್ದಾರೆ. ಜೊತೆಗೆಕ್ಷೀರವಿತ್ತು ಪೂಜೆಗೊಳ್ಳುವ ಗೋವಿನ ದೃಷ್ಟಾಂತವನ್ನುಕೊಟ್ಟುತಾವು ಹೇಳುವ ವಿಚಾರವನ್ನು ಖಚಿತಪಡಿಸಿದ್ದಾರೆ. ಆಧುನಿಕ ವಚನ ರಚನೆಗೆ ಮನಸೋತಿರುವ ಎಸ್. ವಿ. ರಂಗಣ್ಣನವರು ತಮಗಾದ ಪ್ರೇರಣೆಯನ್ನು ಈ ರೀತಿ ಹೇಳಿಕೊಂಡಿದ್ದಾರೆ. "ಕಂದ, ವೃತ್ತ, ಷಟ್ಪದಿಗಳನ್ನು ಆಲಿಸಿ ಹರ್ಷಗೊಂಡಿದ್ದೆ. ವಚನಗಳ ಅಪೂರ್ವ ರೀತಿಯನ್ನು, ವಿನೂತನ ಸೊಬಗನ್ನು ಬಗೆದು ಆನಂದ ಪರವಶನಾದೆ, ಮುಗ್ಧನಾದೆ. ಸುಲಭ ಸರಳ ಶಬ್ಧಗಳ ಇಂಪು–ಸೊಂಪು ಶಬ್ಧಗುಚ್ಛಗಳ ಹೊಂದಾಣಿಕೆ, ಅನ್ಯೋನ್ಯ ವಾಕ್ಯಗಳ ಲಯ, ಓಟ, ಬೀಸು ನನ್ನಚಿತ್ತವನ್ನು ಸೂರೆಗೊಂಡವು. ಪುನರುಕ್ತವಾಗುವಅಂಕಿತ, 'ಅಯ್ಯಾ' ಎಂಬ ಸಂಬೋಧನೆ ಪ್ರಾಸಾನುಪ್ರಾಸಗಳ ಕುಣಿತ, ಪ್ರಶ್ನೆಗಳ ಸುರಿಮಳೆ, ಉಪಮಾನಗಳ ಜಲಪಾತಒಟ್ಟಾಗಿ ನನ್ನನ್ನು ವಚನ ದಾಸನನ್ನಾಗಿ ಮಾಡಿದವು."

ಎಸ್. ವಿ. ರಂಗಣ್ಣನವರ 'ರಂಗಬಿನ್ನಪ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದದ್ದು ಆಧುನಿಕ ವಚನ ಸಾಹಿತ್ಯಕ್ಕೆ ಸಂದ ಗೌರವವಾಗಿದೆ. ಎಸ್. ವಿ. ರಂಗಣ್ಣನವರ ವಚನ ಶೈಲಿಯನ್ನು ಈ ವಚನದಲ್ಲಿ ಕಾಣಬಹುದು. ದೇವಲೋಕ ಭರತ ಖಂಡ ಎರಡೂ ನನ್ನದಾದಲ್ಲಿ ದೇವಲೋಕವ ಬಿಟ್ಟುಕೊಡುವೆ ದೇವತೆಗಳಿಗೆ ನಾ ಬಾಳುವೆ ಭರತ ಖಂಡದಲ್ಲಿ ಅಮರಾವತಿ, ಮೈಸೂರು ಎರಡೂ ನನ್ನದಾದಲಿ ಅಮರಾವತಿಯ ದಾನವೀಯುವೆ ದೇವೇಂದ್ರನಿಗೆ ಬಾಳುವೆ ಮುದ್ದು ಮೈಸೂರಿನಲ್ಲಿ ಎನ್ನಿಷ್ಟವನು ಆಗಗೊಳಿಸಯ್ಯ ಮಾವಿನಕೆರೆ ರಂಗಯ್ಯಎಸ್.ವಿ ರಂಗಣ್ಣನವರ ವಚನಗಳಲ್ಲಿ ಗದ್ಯದಕೈ ಮೇಲಾಗಿದೆ. ಪಾಂಡಿತ್ಯ ವಿಮರ್ಶೆ ಎದ್ದು ಕಾಣುತ್ತದೆ. ತಮ್ಮ ಅಪಾರ ವಿದ್ವತ್ತು ಮತ್ತು ಅಧ್ಯಯನಗಳನ್ನು ವಚನ ರಚನೆಗೆ ಬಳಸಿಕೊಂಡಿದ್ದಾರೆ.

## ಪರಾಮರ್ಶನ ಗ್ರಂಥಗಳು

೧. ಚಂದ್ರಯ್ಯನಾಯ್ಡು, ವಚನ ವೀಚಿ (೧೯೯೧)

೨. ಹರ್ಡೇಕರ ಮಂಜಪ್ಪ, ಜನ ಸೇವಕನ ವಚನಗಳು (೧೯೩೨)

೩. ಕಲಬುರ್ಗಿ ಎಂ. ಎಂ (ಡಾ), ಕನ್ನಡದಲ್ಲಿ ವಚನ ಸಾಹಿತ್ಯ (೧೯೭೮)

೪. ಮರುಳಯ್ಯ ಸಾ.ಶಿ (ಸಂ), ಕಾವ್ಯಾನಂದ (೧೯೮೧)

೫. ಮುಗಳಿರಂ.(ಡಾ), ಕನ್ನಡ ಸಾಹಿತ್ಯಚರಿತ್ರೆ (೧೯೯೦)

೬. ನಾರಾಯಣ ಪಿ. ವಿ (ಡಾ), ವಚನ ಸಾಹಿತ್ಯಒಂದು ಸಾಂಸ್ಕೃತಿಕಅಧ್ಯಯನ (೧೯೮೩)

೭. ಪರಮೇಶ್ವರ ಭಟ್ಟಎಸ್. ವಿ., ಉಪ್ಪುಕಡಲು (೧೯೭೦)

೮. ಪೂಜಾರ ವಿ. ಜಿ (ಡಾ), ಆಧುನಿಕ ವಚನ ಸಾಹಿತ್ಯ (೧೯೯೮)

೯. ರಂಗಣ್ಣಎಸ್. ವಿ., ರಂಗ ಬಿನ್ನಪ (೧೯೮೩)

೧೦. ಸಂಗಮೇಶ ಹಂಡಿಗಿ (ಡಾ), ಶ್ರೀ ಜಚನಿ ವಚನ ಸಾಹಿತ್ಯಒಂದುಅಧ್ಯಯನ (೧೯೯೫)